ಕೂಲಂಕಶವಾಗಿ ಪರೀಕ್ಷಿಸುತ್ತಾ, 'ಅಯ್ಯಯ್ಯಪ್ಪ ಕಜ್ಜಿ ಅಂಬೋದೇನು ಕಜ್ಜಿನೆ ಮಾಮ. ಇವ್ರು ಬರ್ಲಿ ಇರು ಆಸ್ಪತ್ರೆಗೆ ಕಳ್ಸಿ ಮಾತ್ರೆ ಗೀತ್ರೆ ತರ್ಸೋಣ...' ಎಂದು ಕನಿಕರ ತೋರಿದ್ದಳು. 'ಅಯ್ಯೊ ಅದು ಮಾತ್ರೆಗೀತ್ರೆಗೆ ಹೋಗೋ ಕಾಯ್ಲೆ ಅಲ್ವೇಳಮ್ಮ, ಒಂದಿಪ್ಪತ್ ದಿನನಾದ್ರೂ ಕಾಡಿಸ್ದೆ ಹೋಗಲ್ಲ...' ಎಂದು ರೊಪ್ಪದ ಕಡೆಗೆ ನಡೆದ. ಕಜ್ಜಿಗೆ ನಾಟಿ ಔಷಧಿಯನ್ನು ಕೊಡುತ್ತಿದ್ದ ಹನುಮಂತಯ್ಯ, ಓಬಮ್ಮ ಇಬ್ಬರೂ ಪರಲೋಕವಾಸಿಗಳಾಗಿದ್ದರು. ಕರಿಯನುಮಪ್ಪನಿಗೆ ಕಜ್ಜಿ ಎದ್ದೇಳುತ್ತಿರುವುದು ಇದೇ ಮೊದಲ ಬಾರಿ. ಕಜ್ಜಿ ಎದ್ದವರ ಗೋಳನ್ನು ಹಿಂದೆ ಊರಿನಲ್ಲಿ ಕಾಣದವನೇನೂ ಅಲ್ಲ.

ಹಿಟ್ಲೊತ್ತಿನ ಮೇಲೆ ಸೊಸೆ ಅನುಸೂಯಮ್ಮ ಒಲೆಯ ಗುಡಾಣದಲ್ಲಿದ್ದ ಬಿಸಿ ನೀರನ್ನು ಬಕೀಟಿಗೆ ತೋಡಿ ಬಚ್ಚಲಲ್ಲಿ ಇಟ್ಟಳು. ಬಣವೆಯಲ್ಲಿದ್ದ ಬೇವಿನಗಿಡದಿಂದ ಎಳೆಸೊಪ್ಪನ್ನು ಕಿತ್ತುತಂದು ಜಜ್ಜಿ ರಸವನ್ನು ಕೈ ಕಾಲುಗಳಿಗೆ ಬಳಿದುಕೊಳ್ಳಲು ಕರಿಯನುಮಪ್ಪನಿಗೆ ಕೊಟ್ಟಿದ್ದಳು. ಮೈಗೆ ತಾನೇ ಬಳಿದು ಸ್ನಾನ ಮಾಡಲು ಸಹಾಯ ಮಾಡಿದ್ದಳು. ಕರಿಯನುಮಪ್ಪನಿಗೆ ಯಾಕೊ ಸ್ನಾನ ತೃಪ್ತಿ ಅನ್ನಿಸಲಿಲ್ಲ. ಹಾಗೇ ದೇಹಕ್ಕೆ ಬಿಸಿ ನೀರನ್ನು ನಿರಂತರವಾಗಿ ಸುರಿದುಕೊಳ್ಳುತ್ತಲೇ ಇದ್ದು ಬಿಡೋಣ ಅನ್ನಿಸುತ್ತಿತ್ತು. ಕುಡಿಯುವ ನೀರಿಗೂ ಭಂಗ ಉಂಟಾಗಿದ್ದರಿಂದ ಊರಿನಲ್ಲಿ ಜನ ತೃಪ್ತಿಯಾಗಿ ಸ್ನಾನ ಮಾಡಲೂ ಸಾಧ್ಯವಾಗಿರಲಿಲ್ಲ. ಮಗ ಎಮ್ಮೆ ಗಾಂಧಿಯು ಯಾರನ್ನೊ ಆಸ್ಪತ್ರಗೆ ಕಳಿಸಿ ಮುಲಾಮನ್ನು ತರಿಸಿ ಕೊಟ್ಟಿದ್ದ. 'ಇದನ್ನೆ ದಿನಕ್ಕೆರಡು ಸಾರಿ ಹಚ್ಚ. ನಾಳೆ ಎಲೆಕ್ಷನ್ ಕಳ್ಕಂಡ್ ತುಮ್ಕೂರ್ ಆಸ್ಪತ್ರೆಗೆ ಹೋಗ್ಬಿಟ್ ಬಂದ್ರಾಯ್ತು...' ಎಂದು ಎಲೆಕ್ಷನ್ ಗಲಾಟೆಯಲ್ಲಿ ಬಿಜಿಯಾಗಿಬಿಟ್ಟ. ಕರಿಯನುಮಪ್ಪನಿಗೆ ಕಜ್ಜಿ ಎದ್ದಿರುವುದು ಗೊತ್ತಾಗಿ ಊರಿನ ಕೆಲವು ಹಿರಿಯರು ಬಂದು ಮಾತನಾಡಿಸಿಕೊಂಡು ಹೋಗಿದ್ದರು. ತನ್ನ ವಾರಿಗೆಯವನೇ ಆದ ಇನ್ನೂ ಗಟ್ಟಿಮುಟ್ಟಾಗಿ ಓಡಾಡಿಕೊಂಡಿದ್ದ ಕೊಂಡಪ್ಪನು ಬಂದು 'ನೀನೇನು ಎದ್ರುಗಂದ್ಬೇಡ. ನಂಗೆ ಮೂರ್ ಸಾರಿ ಕಜ್ಜಿ ಎದ್ದಿತ್ತು. ಕಜ್ಜಿ ಎದ್ದೋನ್ ಮೈ ವಜ್ರದಂಗೆ ಗಟ್ಟಿ ಆಗ್ತೈತೆ ಅಂತ ಗಾದೆ ಮಾತೇ ಇಲ್ವ. ಒಂದಿಷ್ಟು ನಿಬ್ರ ಇರ್ಬೇಕಷ್ಟೆ...' ಎಂದು ಧೈರ್ಯ ಹೇಳಿದ್ದ. ಯಾರು ಏನೇ ಹೇಳಿದ್ದರೂ ತುರಿಕೆ ಕಾಣಿಸಿಕೊಂಡಾಗ ಕೆರೆದುಕೊಂಡರೆ ಮಾತ್ರವೇ ಸಮಾಧಾನವಾಗುತ್ತಿದ್ದದ್ದು. ಮೈ ಕೆರೆದುಕೊಳ್ಳಲು ಒಂದು ಹಳೆ ಟವಲ್ಲನ್ನು, ಪೊರಕೆಯನ್ನು ಸೊಸೆ ಕರಿಯನುಮಪ್ಪನ ಪಕ್ಕದಲ್ಲೆ ಇಟ್ಟಿದ್ದಳು. ಕರಿಯನುಮಪ್ಪನನ್ನು ನೋಡಿಕೊಂಡು ಹೋಗಲು ತಿಮ್ಮಯ್ಯ ಮೇಷ್ಟ್ರು ಕೂಡ ಬಂದಿದ್ದರು. ತಿಮ್ಮಯ್ಯ ಕರಿಯನುಮಪ್ಪನ ಸಂಬಂಧಿಯೇ ಆಗಿದ್ದ. ತನಗಿಂತ ಕಿರಿಯವನಾಗಿದ್ದರೂ ತಿಮ್ಮಯ್ಯ ಮಾಸ್ತರಿಕೆ ಚಾಕರಿ ಮಾಡಿ ನಿವೃತ್ತನಾಗಿದ್ದ. ಸಾಮಾಜಿಕ ಕಳಕಳಿಯಿದ್ದ ತಿಮ್ಮಯ್ಯ ಊರಿನಲ್ಲಿ ಕೆಲವು ಸುಧಾರಣೆಗಳನ್ನು ತರಲು ಪ್ರಯತ್ನಿಸಿದರೂ ಸಪೋರ್ಟು ಸಿಕ್ಕಿರಲಿಲ್ಲ. ಊರಿನಲ್ಲಿನ ಗಂಡಸರ ಕುಡಿತ ತಪ್ಪಿಸಲು ಪ್ರಯತ್ನಿಸಿ ಸೋತು ಹೋಗಿದ್ದ. 'ಏನೋ ತಿಮ್ಮಪ್ಪ ಇಂಥ ಕಾಲ ಬಂದೋಯ್ತು. ಊರ್ನಾಗೆ ಯಾರ್ನಾತ್ನ ಯಾರೂ ಕೇಳ್ದಂಗಾದ್ರು...' ಎಂದು ಕರಿಯನುಮಪ್ಪ ಕೊರಳನ್ನು ಕೆರೆದುಕೊಳ್ಳುತ್ತಾ ವ್ಯಥೆಪಟ್ಟಿದ್ದ. 'ಅಯ್ಯೊ ಕರಿಯನುಮಪ್ಪ ಅದ್ರ ಕಥೆ ಯಾಕ್ಬಿಡು. ನಿಮ್ ಮೈಗೆ ಅಂಟಿಕೊಂಡಂಗೆ ಕಜ್ಜಿ ಇಡೀ ದೇಶುಕ್ಕೆ ಅಂಟ್ಕೊಂಡೈತೆ. ನೀವ್ ಕಂಡಂಗೆ ಗಾಂಧಿ ಮಹಾತ್ಮ ಇಡೀ ದೇಶಾನೆಲ್ಲ ಬರಿ ಮೈನಾಗೆ ಸುತ್ತಿ ಸ್ವಾತಂತ್ರ್ಯ ತಂದ್ಕೊಟ್ಟ. ಮೈಬಗ್ಸಿ ಕೆಲ್ಸ ಮಾಡೋರು ಒಬ್ರೂ ಇಲ್ದಂಗಾಯ್ತು. ಓಟ್ ಎಳ್ಕಂಬಾಕೆ ಈ ರಾಜ್ಕೀಯ್ದೋರ್ ಬ್ಯಾರೆ ಏನೇನೊ ಸ್ಕೀಮುಗಳನ್ನ ತಂದವ್ರೆ. ಯಾವೂರ್ನಾಗಾದ್ರೂ ತಕೊ ಸಣ್ಣುಡುಗ್ರೂ ಕುಡ್ಯೋದ್ ಕಲ್ತ್‌ಕಂಡವ್ರೆ ಇದುಕ್ಕೆ ತಕ್ಕನಂಗೆ ಮಳೆ ಮಾರು ಕೈಕೊಟ್ಟು.